4. ಮದ್ದೂರು ಕ್ಷೇತ್ರ :– ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆಳಗೆ ನಮೂದಿಸಿರುವ 15 ಏತ ನೀರಾವರಿ ಯೋಜನೆಗಳು ಬರುತ್ತವೆ :–

(1) ಯಡವನಹಳ್ಳಿ (2) ಬೆಕ್ಕಳಲೆ (3) ಕಿರಂಗೂರು (4) ಹಳೇಹಳ್ಳಿ (5) ಮೂಡ್ಯ (6) ತಗ್ಗಹಳ್ಳಿ (7) ಬೂದಗುಪ್ಪೆ (8) ಕೆ. ಕೋಡಿಹಳ್ಳಿ (9) ಹೆಮ್ಮನಹಳ್ಳಿ (10) ಬಿದರಕೋಟೆ (11) ಆಲೂರು ದೊಡ್ಡಿ (12) ಚಿಕ್ಕೋನಹಳ್ಳಿ (13) ಬಾಣೋಜಿಪಂಥ (14) ಕಬ್ಬಾರೆ; ಮತ್ತು (15) ಶಂಕರಪುರ

ಇವುಗಳಲ್ಲಿ ಯಡವನಹಳ್ಳಿ, ಚಿಕ್ಕಳಲ್, ಹಳೇಹಳ್ಳಿ, ಬೂದಗುಪ್ಪೆ ಮತ್ತು ಬಿದರಕೋಟೆ ಈ 5 ಏತ ನೀರಾವರಿ .ಯೋಜನೆಗಳನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿದ್ದು, ಪೂರ್ಣಗೊಂಡಿರುತ್ತದೆ. ಇವುಗಳಲ್ಲಿ ಬೆಕ್ಕಳಲೆ ಮತ್ತು ಬಿದರಕೋಟೆ ಯೋಜನೆಗಳ ಪರೀಕ್ಷಾರ್ಥ ಚಾಲನೆ ಮಾಡಲಾಗಿರುತ್ತದೆ. ಉಳಿಕೆ 3 ಯೋಜನೆಗಳ ಪರೀಕ್ಷಾರ್ಥ ಚಾಲನೆ ಮಾಡಬೇಕಾಗಿರುತ್ತದೆ.

8 ಸಂಖ್ಯೆಯ ಮೂಡ್ಯ, ತಗ್ಗಹಳ್ಳಿ, ಕೆ. ಕೋಡಿಹಳ್ಳಿ, ಹೆಮ್ಮನಹಳ್ಳಿ ಆಲೂರುದೊಡ್ಡಿ, ಚಿಕ್ಕೋನಹಳ್ಳಿ, ಬಾಣೋಜಿಪಂಥ ಮತ್ತು ಕಬ್ಬಾರೆ ಏತ ನೀರಾವರಿ ಯೋಜನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

ಕಿರಂಗೂರು ಏತ ನೀರಾವರಿ ಯೋಜನೆಯನ್ನು ಗುತ್ತಿಗೆದಾರರಿಗೆ ವಹಿಸಿದ್ದು, ಭೂಸ್ವಾಧೀನ ಅಡಚಣೆಯಿಂದ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಶಂಕರಪುರ ಏತ ನೀರಾವರಿ ಯೋಜನೆಗೆ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

5. ಮಳವಳ್ಳಿ ಕ್ಷೇತ್ರ :– ಈ ಕ್ಷೇತ್ರದ ವ್ಯಾಪ್ತಿಯಲ್ಲಿ 3 ಏತ ನೀರಾವರಿ ಯೋಜನೆಗಳು ಬರುತ್ತವೆ. ಅವುಗಳೆಂದರೆ (1) ಅಂಚೆದೊಡ್ಡಿ (2) ಮಾರೇಹಳ್ಳಿ ; ಮತ್ತು (3) ಪೂರಿಗಾಲಿ ಏತ ನೀರಾವರಿ ಯೋಜನೆಗಳು. ಇವುಗಳಲ್ಲಿ ಮಾರೇಹಳ್ಳಿ ಏತ ನೀರಾವರಿ ಯೋಜನೆಯು ಪ್ರಗತಿಯಲ್ಲಿದೆ.

ಅಂಚೆದೊಡ್ಡಿ ಯೋಜನೆಯನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಪೂರಿಗಾಲಿ ಏತ ನೀರಾವರಿ ಯೋಜನೆಯ ಸರ್ವೆ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿದ್ದು, ಸರ್ವೆ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಈ ಯೋಜನೆಯ ಯೋಜನಾ ವರದಿಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ.

6. ಬನ್ನೂರು ಕ್ಷೇತ್ರ :– ಈ ಕ್ಷೇತ್ರದ ವ್ಯಾಪ್ತಿಯಲ್ಲಿ ನಂಜಾಪುರ ಏತ ನೀರಾವರಿ ಯೋಜನೆಯನ್ನು ಟರ್ನ್–ಕೀ ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳನ್ನು ಪ್ರೋತ್ಸಾಹಿಸಲು ತೋಟಗಾರಿಕಾ ಇಲಾಖೆಯ ಕಾರ್ಯಕ್ರಮಗಳು

3161 (3958) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ತೋಟಗಾರಿಕಾ ವಲಯದ ವ್ಯಾಪ್ತಿಯಲ್ಲಿರುವ ಕೃಷಿ ಪ್ರದೇಶದ ವಿಸ್ತೀರ್ಣವೆಷ್ಟು?

ಆ) ಕಳೆದ ಎರಡು ವರ್ಷಗಳಿಂದ ರಾಜ್ಯ ತೋಟಗಾರಿಕಾ ಇಲಾಖೆಯ ಮಾರ್ಗದರ್ಶನ ಹಾಗೂ ಪ್ರಯತ್ನದಿಂದಾಗಿ ರಾಜ್ಯದಲ್ಲಿ ತೋಟಗಾರಿಕಾ ಬೆಳೆ ಬೆಳೆಯುವ ಕೃಷಿ ಜಮೀನಿನ ಪ್ರದೇಶದ ವಿಸ್ತೀರ್ಣ ಹೆಚ್ಚಳವಾಗಿದೆಯೇ?

ಇ) ಹಾಗಿದ್ದಲ್ಲಿ, ಅದರ ವಿವರಗಳೇನು: (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳನ್ನು ಪ್ರೋತ್ಸಾಹಿಸಲು ಇಲಾಖೆಯು ರೂಪಿಸಿರುವ ಕಾರ್ಯಕ್ರಮಗಳೇನು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) 15.60 ಲಕ್ಷ ಹೆಕ್ಟೇರ್ಸ್ (2001–02) ರಂತೆ

ಆ) ಹೌದು

ಇ) 2000–01ನೆಯ ಸಾಲಿನಲ್ಲಿ 15.30 ಲಕ್ಷ ಹೆಕ್ಟೇರ್‌ಗಳಿದ್ದ ವಿಸ್ತೀರ್ಣವು 2001–02ನೇ ಸಾಲಿನಲ್ಲಿ 15.60 ಲಕ್ಷ ಹೆಕ್ಟೇರ್‌ಗಳಾಗಿದ್ದು 30,200 ಹೆಕ್ಟೇರ್ ಹೆಚ್ಚಳವಾಗಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ.

ಈ) ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳನ್ನು ಪ್ರೋತ್ಸಾಹಿಸಲು ಇಲಾಖಾ ಯೋಜನೆಗಳಡಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದು, ಉತ್ಕೃಷ್ಟ ಗುಣಮಟ್ಟದ ಕಸಿ/ಸಸಿ ಗಿಡಗಳ ವಿತರಣೆ, ಅಂಗಾಂಶ ಕೃಷಿ ಸಸಿಗಳ ವಿತರಣೆ, ಆಧುನಿಕ ತಾಂತ್ರಿಕತೆ ಬಗ್ಗೆ ರೈತರಿಗೆ ತರಬೇತಿ, ಪ್ರದರ್ಶನ, ವಿಚಾರಸಂಕಿರಣಗಳು ಮತ್ತು ಪ್ರವಾಸ ಏರ್ಪಡಿಸುವುದು, ಪ್ರಾತ್ಯಕ್ಷತೆ ತಾಕುಗಳ ಸ್ಥಾಪನೆ, ಪ್ರದೇಶ ವಿಸ್ತರಣೆ ಕಾರ್ಯಕ್ರಮಗಳು ಪ್ರಮುಖವಾಗಿವೆ. ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿರುವ ಯೋಜನಾ ಕಾರ್ಯಕ್ರಮಗಳು ಇತಿಂವೆ.

1. ತೋಟಗಾರಿಕೆ ಬೆಳೆಗಳಿಗಾಗಿ ಉತ್ಕೃಷ್ಟ ಗುಣಮಟ್ಟದ ನಾಟಿ ಮಾಡುವ ವಸ್ತುಗಳ ಉತ್ಪಾದನೆ ಮತ್ತು ವಿತರಣೆ (2) ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ ಯೋಜನೆ (3) ತೋಟದ ಬೆಳೆಗಳ ಕೀಟ–ರೋಗಗಳ ಸಮಗ್ರ ನಿಯಂತ್ರಣ ಯೋಜನೆ (4) ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆ (5) ತೋಟಗಾರಿಕೆ ಬೆಳೆಗಳ ಸಸ್ಯೋತ್ಪಾದನೆ ಯೋಜನೆ (6) ಸಸ್ಯ ಸಂರಕ್ಷಣಾ ಪ್ರಯೋಗಾಲಯಗಳು (7) ರೈತರಿಗೆ ತರಬೇತಿ (8) ಸರ್ಕಾರಿ ಕಛೇರಿ ಮತ್ತು ಅತಿಥಿ ಗೃಹಗಳ ಮುಂದಿಡಲು ಅಲಂಕಾರಿಕ ಗಿಡಗಳ ಅಭಿವೃದ್ಧಿ (9) ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಯೋಜನೆಯಡಿಯಲ್ಲಿ ರೈತರಿಗೆ ಸಹಾಯ (10) ಸಾಮಾಜಿಕ ತೋಟಗಾರಿಕೆ (11) ಸಸ್ಯ ಸಂರಕ್ಷಣೆ (12) ವಿಶೇಷ ಘಟಕ ಯೋಜನೆ (13) ಗಿರಿಜನ ಉಪಯೋಜನೆ (14) ಉಷ್ಣ ಮತ್ತು ಶುಷ್ಕವಲಯದ ಹಣ್ಣುಗಳ ಸಮಗ್ರ ಅಭಿವೃದ್ಧಿ (15) ತರಕಾರಿ ಬೆಳೆಗಳ ಸಮಗ್ರ ಅಭಿವೃದ್ಧಿ (16) ಸಮಗ್ರ ಕೋಕೋ ಅಭಿಸಮಗ್ರ ಗೇರು ಅಭಿವೃದ್ಧಿ (18) ಔಷಧೀಯ ಹಾಗೂ ಬೆಳೆಗಳ ಸಮಗ್ರ ಅಭಿವೃದ್ಧಿ ಕೃಷಿಯಲ್ಲಿ ಪ್ಲಾಸ್ಟಿಕ್ ವಾಣಿಜ್ಯ ಪುಷ್ಪಗಳ ಸಮಗ್ರ ಅಭಿವೃದ್ಧಿ (21) ಸಾಂಬಾ ಸಮಗ್ರ ಅಭಿವೃದ್ಧಿ (22) ತಾಳೆ ಬೆಳೆ ಅಭಿವೃದ್ಧಿ ಯೋಜನೆ ಸಮಗ್ರ ತೆಂಗು ಬೇಸಾಯ.

ಅನುಬಂಧ

ಕರ್ನಾಟಕ ರಾಜ್ಯದ ಜಿಲ್ಲಾವಾರು ತೋಟಗಾರಿಕಾ ಬೆಳೆಗಳ ವಿಸ್ತೀರ್ಣ

ವಿಸ್ತೀರ್ಣ: ಹೆಕ್ಟೇರುಗಳಲ್ಲಿ

ಕ್ರ.	ಜಿಲ್ಲೆ	ವಿಸ್ತೀರ್ಣ	ವಿಸ್ತೀರ್ಣ
1.	ಬೆಂಗಳೂರು (ನ)	25453.45	29636.70
2.	ಬೆಂಗಳೂರು (ಗ್ರಾ)	76411.5	76412.00

ಕ್ರ.	ಜಿಲ್ಲೆ	ವಿಸ್ತೀರ್ಣ	ವಿಸ್ತೀರ್ಣ
3.	ಚಿತ್ರದುರ್ಗ	109926	111715.00
4.	ದಾವಣಗೆರೆ	135943	51423.00
5.	ಕೋಲಾರ	105488	112219.43
6.	ಶಿವಮೊಗ್ಗ	48445	50271.00
7.	ತುಮಕೂರು	50576	151445.00
8.	ಬಾಗಲಕೋಟೆ	47282	21739.50
9.	ಬೆಳಗಾವಿ	19836.14	49661.00
10.	ಬಿಜಾಪುರ	61920.37	52596.00
11.	ಧಾರವಾಡ	28201.5	115744.00
12.	ಗದಗ	888410.3	46812.15
13.	ಹಾವೇರಿ	58160	81017.50
14.	ಉತ್ತರ ಕನ್ನಡ	107393	27160.09
15.	ಬಳ್ಳಾರಿ	81117	37406.00
16.	ಬೀದರ್	67254	9566.00
17.	ಗುಲ್ಬರ್ಗ	46361	22348.50
18.	ಕೊಪ್ಪಳ	20967.7	12814.00
19.	ರಾಯಚೂರ್	113664	17598.00
20.	ಚಾಮರಾಜನಗರ	40014.64	20932.20
21.	ಚಿಕ್ಕಮಗಳೂರು	72779.5	79956.10
22.	ದಕ್ಷಿಣ ಕನ್ನಡ	25327.65	91989.60
23.	ಹಾಸನ	23050	107393.00
24.	ಕೊಡಗು	17398	28904.00
25.	ಮಂಡ್ಯ	11615.12	60623.20
26.	ಮೈಸೂರು	36434	33692.50
27.	ಉಡುಪಿ	10811	59394.00
	ರಾಜ್ಯದ ಮೊತ್ತ	**15,30,240**	**15,60,469**

ಪಟ್ಟಣ ಮತ್ತು ನಗರ ಪ್ರದೇಶದಲ್ಲಿ ಹಾಲಿ ಇರುವ ಸೀಮೆ ಎಣ್ಣೆ ಕೂಪನ್‌ಗಳ ಸಂಖ್ಯೆಯನ್ನು ಕಡಿತಗೊಳಿಸಿರುವುದು

3162 (3959) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಟ್ಟಣ ಹಾಗೂ ನಗರ ಪ್ರದೇಶದಲ್ಲಿ ಪ್ರಸ್ತುತ ಇದ್ದ ಸೀಮೆಎಣ್ಣೆ ಕೂಪನ್‌ಗಳ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆಯೇ?